17

# ಶಿಷ್ಯತ್ವದ ಬೆಲೆ

# (8:18-22)

8 ಮತ್ತು 9ನೇ ಅಧ್ಯಾಯಗಳು ಮೂರು ಅದ್ಭುತಗಳನ್ನು ಒಳಗೊಂಡಿವೆ (8:1-17; 8:23-9:8; 9:18-34), ಅವುಗಳನ್ನು ಎರಡು ವಿಭಾಗಗಳನ್ನಾಗಿ ಮಾಡಿ ಚರ್ಚಿಸಲಾಗಿದೆ ಅವೆರಡು ಶಿಷ್ಯತ್ವದ ಕುರಿತು ಒತ್ತಿ ಹೇಳುತ್ತವೆ (8:18-22; 9:9-17). ಮತ್ತಾಯ 8:18-22ರಲ್ಲಿ ಶಿಷ್ಯತ್ವದ ಮೇಲಿರುವ ಮೊದಲಿನ ಸಂಭಾಷಣೆಯು ಒಳಗೊಂಡಿದೆ, ಯೇಸುವನ್ನು ಹಿಂಬಾಲಿಸಬೇಕಾಗಿರುವ ಇಬ್ಬರು ಪುರುಷರು ವಿಷಯವನ್ನು ಹೇಳುತ್ತದೆ. ತನ್ನ ಶಿಷ್ಯರು ಏನು ಮಾಡಬೇಕೆನ್ನುವ ಯೇಸುವಿನ ಕೋರಿಕೆಯು ಚರ್ಚೆಯ ಕೇಂದ್ರಬಿಂದುವಾಗಿದೆ. ಮುಖ್ಯ ಶಬ್ದಗಳು “ಹಿಂಬಾಲಿಸು” (*akoloutheō*) ಮತ್ತು “ಹೋಗು” (*aperchomai*) ಇವುಗಳು ಒತ್ತಿ ಹೇಳುವದಕ್ಕಾಗಿ ಕೆಲವು ಸಾರಿ ಪುನರಾವರ್ತನೆ ಆಗಿದೆ.

## ಹಣಕಾಸು (8:18-20)

**18ಯೇಸು ತನ್ನ ಸುತ್ತಲಿದ್ದ ಬಹು ಜನಗಳ ದೊಡ್ಡ ಗುಂಪುಗಳನ್ನು ಕಂಡು ಆಚೇದಡಕ್ಕೆ ಹೊರಟು ಹೋಗಬೇಕೆಂದು ಅಪ್ಪಣೆಕೊಟ್ಟನು. 19ಆಗ ಒಬ್ಬ ಶಾಸ್ತ್ರಿಯು ಹತ್ತರಕ್ಕೆ ಬಂದು ಆತನಿಗೆ ಗುರುವೇ, ನೀನು ಎಲ್ಲಿಗೆ ಹೋದರೂ ನಾನು ನಿನ್ನ ಹಿಂದೆ ಬರುತ್ತೇನೆ ಎಂದು ಹೇಳಲು 20ಯೇಸು ಅವನಿಗೆ - ನರಿಗಳಿಗೆ ಗುದ್ದಗಳಿವೆ; ಆಕಾಶದಲ್ಲಿ ಹಾರಾಡುವ ಹಕ್ಕಿಗಳಿಗೆ ಗೂಡುಗಳಿವೆ; ಆದರೆ ಮನುಷ್ಯಕುಮಾರನಿಗೆ ತಲೆಯಿಡುವಷ್ಟು ಸ್ಥಳವೂ ಇಲ್ಲ ಎಂದು ಹೇಳಿದನು.**

**ವಚನ 18.** ಆದಾಗ್ಯೂ, ಯೇಸು ದೇವರ ದೈವೀಕ ಮಗನಾಗಿದ್ದನು, ಆತನ ತಾಯಿ ಮರಿಯಳ ಮುಖಾಂತರ ಮನುಷ್ಯಕುಮಾರನಾದನು (8:20). ಅದು ನಿಜವಿರುವಾಗ, ಆತನು ಮಾನವರ ಮನೋಭಾವನೆಯ ವಿಷಯಗಳಿಂದ ಬಳಲಿದನು. ಆತನು ಕಪೆರ್ನೌಮಿಗೆ ಬಂದಾಗಿನಿಂದ, ಆತನು ಅಸ್ವಸ್ಥಜನರ ಗುಂಪುಗಳಿಂದ ಮುತ್ತಿಗೆ ಹಾಕಲ್ಪಟ್ಟನು. ಇದರ ಪರಿಣಾಮವಾಗಿ, ಆತನು ದೈಹೀಕವಾಗಿ ಮತ್ತು ಮಾನಸಿಕ ದಣಿವು ಆತನ ಅನುಭವಕ್ಕೆ ಬರಲು ಪ್ರಾರಂಭವಾಯ್ತು. ಯಾವಾಗ **ಯೇಸು ತನ್ನ ಸುತ್ತಲಿದ್ದ** [ಸೇರಿ ಬರುವದನ್ನು] **ಬಹು ಜನಗಳ ದೊಡ್ಡ ಗುಂಪುಗಳನ್ನು ಕಂಡು** [ತನ್ನ ಶಿಷ್ಯರಿಗೆ] **ಆಚೆದಡಕ್ಕೆ ಹೊರಟು ಹೋಗಬೇಕೆಂದು ಅಪ್ಪಣೆಕೊಟ್ಟನು.** “ಆಚೆ ದಡಕೆ” ಎನ್ನುವಾಗ ಗಲಿಲಾಯ ಸಮುದ್ರ ಸಮವಾಗಿ ಎರಡು ಭಾಗಗಳು ಇದ್ದವು, ಅವುಪೂರ್ವ ಭಾಗ ಮತ್ತು ಪಶ್ಚಿಮಭಾಗ. ಅದು ಕಲ್ಪಿತವಾದ ನೇರ ರೇಖೆಯಂತೆ ಇಬ್ಭಾಗವಾಗಿ ಯೋರ್ದಾನ ನದಿಯ ಪ್ರವೇಶವಾಗುವ ನದಿಯ ದಂಡೆ ಮತ್ತು ಹೊರಗಡೆ ಮುಕ್ತಾಯದ ನದಿ ಅಂಚಿಗೆ ಸಂಪರ್ಕವಾಗುತ್ತದೆ. ಸಾಂಕೇತಿಕವಾಗಿ ಇದನ್ನು ಸಮುದ್ರದ ಪೂರ್ವಭಾಗದಲ್ಲಿದೆ ಎಂದು ಸೂಚಿಸಲಾಗಿದೆ, ಅದು ದೇಹಪೊಲಿಯದ ಪ್ರಾಂತವಾಗಿದೆ. ಗಲಿಲಾಯ ಸಮುದ್ರದ ಉತ್ತರ ಪಶ್ಚಿಮಕ್ಕೆ ಕಪೆರ್ನೌಮ ಇದೆ.

**ವಚನ 19.** ಆತನು ಆಚೆದಡಕ್ಕೆ ಹೋಗುವದಕ್ಕಾಗಿ ಚಿಕ್ಕ ದೋಣಿಯನ್ನು ಹತ್ತುವ ಮೊದಲೇ, ಯೇಸು ಮತ್ತೊಂದಾವರ್ತಿ ಒಬ್ಬ ಶಾಸ್ತ್ರಿಯು ಆತನನ್ನು ಸಂದಿಸಿದನು. **ಹತ್ತಿರಕ್ಕೆ ಬಂದು ಆತನಿಗೆ ಗುರುವೇ, ನೀನು ಎಲ್ಲಿಗೆ ಹೋದರೂ ನಾನು ನಿನ್ನ ಹಿಂದೆ ಬರುತ್ತೇನೆ.** “ಒಬ್ಬ

ಶಾಸ್ತ್ರಿ" (*grammateus*) ಆತನು ಶ್ರಮವಹಿಸಿ ಹಳೆ ಒಡಂಬಡಿಕೆಯನ್ನು ಸಂಪೂರ್ಣವಾಗಿ ಕೈಯಿಂದಲೆ ಬರೆದಂತವನು ಮತ್ತು ಇತರೆ ಪ್ರಮುಖ ದಾಖಲೆಗಳನ್ನು ಕೈಯಿಂದಲೆ ಬರೆದನು. ಅವರ ಪಾವಿತ್ರ ಉದ್ಯೋಗದ ನಿಮಿತ್ತ ಅವರು ವಾಕ್ಯದ ವಿಷಯದಲ್ಲಿ ಪಂಡಿತರಾದರು. ಅವರು ಹೀಗೆ ವರ್ಗಿಕರಿಸಲ್ಪಟ್ಟವರು ಧರ್ಮಶಾಸ್ತ್ರದ ಬೋಧಕರು ಎಂಬುದಾಗಿ ಸಾಮಾನ್ಯವಾಗಿ ಅಲ್ಲಿ ಫರಿಸಾಯರಿದ್ದರು ಅವರು ಈ ರೀತಿಯಲ್ಲಿ ಆಗಲಿಲ್ಲ.

ಈ ಶಾಸ್ತ್ರಿಗಳ ಪ್ರಮಾಣಿಕತೆಗೆ ನಮಗೆ ಪ್ರಶ್ನೆಮಾಡಲು ಯಾವುದೇ ಕಾರಣಗಳಿಲ್ಲ. ಇಲ್ಲವಾದರೆ ಆತನ ಉತ್ತೇಜನ ಪ್ರೋತ್ಸಾಹವು ಯೇಸುವನ್ನು ಹಿಂಬಾಲಿಸುವದು ತನ್ನ ಸ್ವಂತಲಾಭಕ್ಕಾಗಿ ಆಗುತ್ತಿತ್ತು. ಆತನು ಯೇಸುವನ್ನು ಗೌರವದಿಂದ, "ಗುರುವೇ" (*didaskalos*) ಎಂಬುದಾಗಿ ಕರೆಯುತ್ತಿದ್ದಾನೆ. ಆ ಶಾಸ್ತ್ರೀಯು ಅಂಥಹ ಬಿರುದು ಕೊಟ್ಟು ಕರೆಯುವದು ಮರೆಯಲಾರದಂಥದ್ದು ಆಗಿದೆ. ಹೀಗಿದ್ದರೂ, ಅನೇಕ ಜನರು - ಯೇಸುವಿನ ವಿರೋಧಿಗಳು ಕೂಡ - ಆತನನ್ನು ಈ ರೀತಿಯಾಗಿ ಸಂಬೋಧಿಸಿದರು (12:38; 19:16; 22:16, 24, 36).

**ವಚನ 20. ಯೇಸು** ಆ ಶಾಸ್ತ್ರಿಗೆ, **ನರಿಗಳಿಗೆ ಗುದ್ದುಗಳಿವೆ; ಆಕಾಶದಲ್ಲಿ ಹಾರಾಡುವ ಹಕ್ಕಿಗಳಿಗೆ ಗೂಡುಗಳಿವೆ - ಆದರೆ ಮನುಷ್ಯಕುಮಾರನಿಗೆ ತಲೆಯಿಡುವಷ್ಟು ಸ್ಥಳವೂ ಇಲ್ಲ** ಎಂದು ಹೇಳಿ ಆ ಶಾಸ್ತ್ರಿಯ ಮನಸ್ಸಿನಲ್ಲಿರುವ ನಿರ್ಣಯವನ್ನು ಪರೀಕ್ಷಿಸಿದನು. ಮತ್ತೊಂದು ಸಾರಿ ಆತನು ತನ್ನ ಸಂದೇಶ ತಿಳಿಸಿಹೇಳಲು ಸೃಷ್ಠಿಯನ್ನು ("ನರಿಗಳು" ಮತ್ತು "ಪಕ್ಷಿಗಳನ್ನು") ಉಪಯೋಗಿಸಿಕೊಂಡನು (ನೋಡಿರಿ 6:26, 28). ಯೇಸುವಿನ ಎತ್ತರ ಸಾಮಾನ್ಯ ನಾಣ್ಣುಡಿಯಂತೆ ಈ ಸಂಧರ್ಭದಲ್ಲಿ ಅದು ಸ್ಪಷ್ಟವಾಗಿ ಮಾತಾಡುತ್ತಿದೆ.[1] Michael J. Wilkins ರವರು, ಯೇಸು ಆ ರೀತಿಯಾಗಿ ಹೇಳುವಾಗ "ಆತನ ಸೇವೆಯು ಅನೇಕ ಲಾಭ ಅನೂಕೂಲಗಳೊಂದಿಗೆ ಸ್ವಾಸಲ್ಪಟ್ಟಿರುವ ಸೇವೆ ಅದಾಗಿರಲಿಲ್ಲ ಎಂಬ ಚಿತ್ರವನ್ನು ಅವರು ಕಲ್ಪಿಸಿಕೊಳ್ಳುತ್ತಾರೆ."[2]

ಯೇಸು ಇರುವದಕ್ಕೆ ಸ್ಥಳವಿಲ್ಲವೆಂದು ಹೇಳುವಾಗ ಆತನು "ಮನೆಯಿಲ್ಲದೆ" ಇರಲಿಲ್ಲ ಎನ್ನುವ ಆಲೋಚನೆ ಅಲ್ಲ. ಆ ಸಮಯದಲ್ಲಿ ಆತನು ಕಪೆರ್ನೌಮಿಗೆ ಹೋಗುವದಕ್ಕೆ ಸಿದ್ಧವಾಗುತ್ತಿದ್ದನು, ಆತನ ಸಾರ್ವಜನಿಕ ಸೇವೆಯಲ್ಲಿ ಹೆಚ್ಚಾಗಿ ಆತನಿಗೆ ಮನೆಯಿತ್ತು ಎಂದು ಕಾಣಿಸುತ್ತದೆ. ಆತನು ಮರಿಯಳು, ಮಾರ್ಥ ಮತ್ತು ಲಾಜರ ವಾಸಮಾಡು ಬೇಥಾನ್ಯದಲ್ಲಿ ಅವರ ಮನೆಯಲ್ಲಿ ಕಾಲ ಕಳೆದನು (ಲೂಕ 10:38, 39; ಯೋಹಾನ 12:1-3), ಮತ್ತು ಖಂಡಿತವಾಗಿ ಆತನು ಅನೇಕ ಮನೆಗಳಲ್ಲಿ ಆತನಿಗೆ ಸ್ವಾಗತಿಸಲಾಯಿತು (ನೋಡಿರಿ 10:11) ಇನ್ನು ಸಹ, ಆತನದ್ದೆ ಸ್ವಂತ ಎಂದು ಹೇಳುವ ಮನೆ ಇರಲಿಲ್ಲ. ಆತನು ಪ್ರಾಯೋಗಿಕ ಉದ್ದೇಶ ಹೊಂದಿದನು, ಆತನು ಸಂಚಾರಿ ಬೋಧಕನಾಗಿದ್ದನು, ಪ್ರಯಾಣಿಸುವ ಸುವಾರ್ತಿಕ ನಾಗಿದ್ದನು, ಆತನು ನಿರಂತರವಾಗಿ ಮುಂದೆ ಮುಂದೆ ಸಾಗುತ್ತಿದ್ದನು. ಹಿಂದಿನ ಕಾಲದ ಪ್ರವಾದಿಗಳಂತೆ, ಕೆಲವು ಸಾರಿ ನಕ್ಷತಗಳ ಕೆಳಗೆ ಮಲಗಿಕೊಂಡಿರಬಹುದು, ಆತನ ತಲೆದಿಂಬು ಒಂದು ಕಲ್ಲು ಆಗಿರುತ್ತಿತ್ತು. ಆತನು ಸ್ವಲ್ಪ ಬಟ್ಟೆಗಳನ್ನು ತನ್ನ ಹಿಂದೆ ತೆಗೆದುಕೊಂಡಿದ್ದನು. ಅತ್ಯುತ್ಸಹವುಳ್ಳ ಶಾಸ್ತ್ರಿ ಯೇಸುವನ್ನು ಹಿಂಬಾಲಿಸುವ ಮೊದಲೆ ಇಂಥಹ ಜೀವಿತದ ಅವಶ್ಯಕತೆ ಇದೆಯೆಂದು ನಿರ್ಧಾರ ಮಾಡಬೇಕಿತ್ತು.

ಯೇಸು ಒಂದೂರಿನಿಂದ ಇನ್ನೊಂದುರಿಗೆ ಪ್ರಯಾಣಮಾಡುತ್ತಿದ್ದಂತೆಯೇ ತನ್ನ ಸ್ವಂತ ಜನರು ಆತನನ್ನು ನಿರಾಕರಿಸಿದರು (ಯೋಹಾನ 1:11), ಮತ್ತು ಯೂದಾಯದವರು ಸಹ ನಿರಾಕರಿಸಿದರು (ಯೋಹಾನ 5:18). ಗಲಿಲಾಯದಲ್ಲಿ ಆತನಿಂದ ತಿರುಗಿಕೊಂಡರು (ಯೋಹಾನ 6:66), ಮತ್ತು ಗಜರೇತ ಸೀಮೆ ಬಿಟ್ಟು ಹೋಗುವಂತೆ ಆತನಿಗೆ ಒತ್ತಾಯ ಮಾಡಿದರು (8:34). ಸಮಾರ್ಯ ಪಟ್ಟಣದವರು ಆತನು ಅಲ್ಲಿ ಇರುವದನ್ನು ಇಷ್ಟಪಡದೆ ಆತನನ್ನು ನಿರಾಕರಿಸಿದರು (ಲೂಕ 9:52, 53). ಅಂತಿಮವಾಗಿ,

ಲೋಕವು ಆತನನ್ನು ನಿರಾಕರಿಸಿದರು (27:23).

"ಮನುಷ್ಯಕುಮಾರನು" ಕರ್ತನು ತನ್ನ ಕುರಿತಾಗಿ ವರ್ಣಿಸಿರುವ ಈ ಶಬ್ದವನ್ನು ಕೆಲವು ಸಾರಿ ಉಪಯೋಗಿಸಲಾಗಿದೆ. ಈ ಪದವು ಹೊಸ ಒಡಂಬಡಿಕೆಯಲ್ಲಿ ಎಂಬತ್ತೆಂಟು ಸಾರಿ ಉಪಯೋಗಿಸಲಾಗಿದೆ. ಮತ್ತಾಯ 8:20ರಲ್ಲಿ ಬಂದಿರುವ ಈ ಪದವು ಮೊದಲನೆ ಸಾರಿ ಉಪಯೋಗಿಸಿರುವಂಥದ್ದು ವಿಶೇಷವಾಗಿದೆ. "ಮನುಷ್ಯ ಕುಮಾರ" ಎಂಬುದು ಸ್ಪಷ್ಟವಾಗಿ ಮೆಸ್ಸೀಯನ ಹೆಸರನ್ನು ಹೇಳುವಂಥದ್ದಾಗಿದೆ (ನೋಡಿರಿ ದಾನಿಯೇಲ 7:13, 14). ಯೇಸುವನ್ನು ಬಹಳ ಹತ್ತಿರವಾಗಿ ಮಾನವಿಯತೆಗೆ ಸಂಪರ್ಕಕಲ್ಪಿಸುವದು ವಿಶೇಷ ಲಕ್ಷಣವಾಗಿದೆ.[3] ಆತನ ಮಾನವೀಯತೆಯ ದೊಡ್ಡ ಕಾರ್ಯ, ರಾಜಾಧಿರಾಜನು ಮತ್ತು ಕರ್ತಾದಿ ಕರ್ತನು ಭೂಲೋಕದ ಎಲ್ಲಾ ಅನೂಕೂಲತೆಗಳಿಂದ ತ್ಯಜಿಸಿ ಆತನು ಏನು ಇಲ್ಲದವನಾದನು ಮತ್ತು ಮನುಷ್ಯರ ಮಧ್ಯದಲ್ಲಿ ದಾಸನ ರೂಪವನ್ನು ಹೊಂದಿ ಜೀವಿಸಿದನು (ನೋಡಿರಿ ಫಿಲಿಪ್ಪಿ 2:5-8).

## ಕುಟುಂಬ (8:21, 22)

**21ಶಿಷ್ಯರಲ್ಲಿ ಬೇರೊಬ್ಬನು ಸ್ವಾಮೀ ನಾನು ಮೊದಲು ಹೋಗಿ ನನ್ನ ತಂದೆಯ ಉತ್ತರ ಕ್ರಿಯೆಗಳನ್ನು ಮಾಡಿ ಬರುವಂತೆ ನನಗೆ ಅಪ್ಪಣೆಯಾಗಬೇಕು ಅನ್ನಲಾಗಿ ಯೇಸು 22ಅವನಿಗೆ - ನನ್ನ ಹಿಂದೆ ಬಾ, ಸತ್ತವರೇ ತಮ್ಮವರಲ್ಲಿ ಸತ್ತುಹೋದವರ ಉತ್ತರ ಕ್ರಿಯೆಗಳನ್ನು ಮಾಡಲಿ ಎಂದು ಹೇಳಿದನು.**

**ವಚನ 21.** ಎರಡನೆಯದಾಗಿ ಕೇಳುವವನು **ಶಿಷ್ಯರಲ್ಲಿ ಬೇರೊಬ್ಬನು** ಎನ್ನುವದು ಅವನು ಮತ್ತು ಶಾಸ್ತ್ರಿ ಇವರಲ್ಲಿ ಒಬ್ಬರು ಕ್ರಿಸ್ತನ ಶಿಷ್ಯರಾಗಿದ್ದರು ಎನ್ನುವ ಅಭಿಪ್ರಾಯವಿದೆ. ಈ ವ್ಯಕ್ತಿ ಹನ್ನೆರಡು ಜನ ಶಿಷ್ಯರಲ್ಲಿ ಒಬ್ಬನಾಗಿದ್ದನು ಎನ್ನುವದಕ್ಕೆ ಬಹಳಷ್ಟು ಆಳವಾದ ನಂಬಿಕೆ ಕಂಡುಬರುತ್ತದೆ, "ಶಿಷ್ಯ" (*mathētēs*) ಎನ್ನುವದು ಬಹಳವಾಗಿ ವಿಶಾಲವಾದ ಆಲೋಚನೆ ಯಲ್ಲಿ ಉಪಯೋಗಿಸಲಾಗಿದೆ. ಈ ಸ್ಥಾನವನ್ನು ಹನ್ನೆರಡು ಜನರಿಗೆ ಉಪಯೋಗಿಸಿರ ಬಹದು, ಇದನ್ನು ಸಾಮಾನ್ಯವಾದ ಆಲೋಚನೆಯಲ್ಲಿ ಕೆಲವು ಸಾರಿ ಹೀಗೆ ಹೇಳಲಾಗಿದೆ, "ಕಲಿಯುವವನು" ಅಥವಾ ವಿದ್ಯಾರ್ಥಿ, ಇವರಿಗೆ ಆತ್ಮೀಕ ಸಂಪರ್ಕ ಇರುವದಿಲ್ಲ. ಇದು ಯಾವುದೇ ಒಂದು "ಹಿಂಬಾಲಕ" ನನ್ನು ಸೂಚಿಸುತ್ತದೆ. ಶ್ರೇಷ್ಠವಾದವನಾಗಿರಬಹುದು ಅಥವಾ ನಿಜವಾಗಿಯೂ ಸಮರ್ಪಿಸಲ್ಪಟ್ಟವನಾಗಿರಬಹುದು.

ಈ ಒಂದು ಸಂದಿಗ್ಧ ಸಮಯದಲ್ಲಿ ಲೂಕನು ಹೀಗೆ ಅಲ್ಲಿ ಬರೆದಿದ್ದಾನೆ ಯೇಸು ಮತ್ತೊಬ್ಬನಿಗೆ "ನನನ್ನು ಹಿಂಬಾಲಿಸು" (ಲೂಕ 9:59; ನೋಡಿರಿ ಮತ್ತಾಯ 8:22). ಇದನ್ನು ನೋಡುವಾಗ ಆ ವ್ಯಕ್ತಿ ತನಗೆ ಬಹಳ ಹತ್ತಿರದ ಶಿಷ್ಯನಾಗಿ ಆತನೊಂದಿಗೆ ಪ್ರಯಾಣಮಾಡಬೇ ಕೆಂದು ಯೇಸು ಅಂದುಕೊಂಡು ಅವರ ಪ್ರಯಾಣ ತಕ್ಷಣವೇ ಪ್ರಾರಂಭಿಸಿ ಗಲಿಲಾಯ ಸಮುದ್ರದ ಆಚೆದಡಕ್ಕೆ ಹೋಗಲು ಸಿದ್ಧರಾದರು. ಆ ವ್ಯಕ್ತಿ ಯೇಸುವಿಗೆ ಹೀಗೆ ಉತ್ತರಿಸಿದನು, **ಸ್ವಾಮೀ, ನಾನು ಮೊದಲು ಹೋಗಿ ನನ್ನ ತಂದೆಯ ಉತ್ತರ ಕ್ರಿಯೆಗಳನ್ನು ಮಾಡಿ ಬರುವಂತೆ ನನಗೆ ಅಪ್ಪಣೆಯಾಗಬೇಕೆಂದನು.** ಆತನ ಪ್ರತಿಕ್ರಿಯೆ ಬಹುಶಃ ಆ ಸಮಯದಲ್ಲಿ ಯೇಸುವಿನ ಹಿಂದೆ ಹಿಂಬಾಲಿಸಲು ಇಷ್ಟವಿರದೆ ನೆಪಹೇಳಿರಬಹುದು. ಅದೇ ಕ್ಷಣದಲ್ಲಿ, ಆತನು ಕುಟುಂಬದ ಬದ್ಧತೆಯನ್ನು ನಿಜವಾದ ಶಿಷ್ಯತ್ವದ ಮುಂದೆ ಅದರ ಪ್ರಾಮುಖ್ಯತೆ ಹೇಳಿದನು (ನೋಡಿರಿ 10:37; ಲೂಕ 14:26).

ಆ ವ್ಯಕ್ತಿಯ ನಿಜವಾದ ಪರಿಸ್ಥಿತಿಯು ಅಸ್ಪಷ್ಟವಾಗಿದೆ, ಆದರೆ ಅಲ್ಲಿ ಮೂರು ಸಾಧ್ಯತೆಗಳನ್ನು ಹುಟ್ಟುಹಾಕುತ್ತದೆ. ಮೊದಲನೆಯದು, ಆ ವ್ಯಕ್ತಿಯು ತಂದೆ ತಾಯಿಯವರಿಗೆ ಕಾಯಿಲೆಯಾಗಿದ್ದಿರಬಹುದು ಇಲ್ಲದೆ ಇರಬಹುದು ಆತನು ಮಾತ್ರ ತನ್ನ ತಂದೆಯೊಂದಿಗೆ

ಉಳಿದುಕೊಳ್ಳುವ ಅವಕಾಶಕ್ಕಾಗಿ ಕೇಳುತ್ತಿದ್ದಾನೆ. ವಯಸ್ಸಾದ ತಂದೆ ತಾಯಿಯವರನ್ನು ಅವರು ಕರ್ತನಲ್ಲಿ ನಿದ್ರೆ ಹೋಗುವ ತನಕ ನೋಡಿಕೊಳ್ಳುವ ಜವಾಬ್ದಾರಿ ಮಕ್ಕಳ ಮೇಲೆ ಇರುತ್ತದೆ. John MacArthur, Jr., ರವರು ಹೇಳಿದ್ದಾರೆ, ಈ ವ್ಯಕ್ತಿಯಿಂದ ಉಪಯೋಗಿಸಿದ ಈ ವಾಕ್ಯಭಾಗವು "ಅದು ಸಾಮಾನ್ಯವಾಗಿ ಪೂರ್ವದಿಕ್ಕಿನ ಪೌರ್ವಾತ್ಯ ಸೂಚಿಸುತ್ತದೆ ತಂದೆಯ ವ್ಯವಹಾರದಲ್ಲಿ ಆತನು ಸಾಯುವವರೆಗೆ ಆತನಿಗೆ ಸಹಾಯ ಮಾಡುವದು"[4] ಮತ್ತು ಪಿತ್ರಾರ್ಜಿತ ಆಸ್ತಿ ಹಂಚುವವರೆಗೆ ತಂದೆಗೆ ಸಹಾಯ ಮಧ್ಯಪೂರ್ವ ದೇಶಗಳ ಭಾಗದಲ್ಲಿ ಚಾಲ್ತಿಯಲ್ಲಿರುತ್ತದೆ.

ಎರಡನೆಯದಾಗಿ, ಆ ವ್ಯಕ್ತಿಯ ತಂದೆ ನಿಜವಾಗಿಯೂ ಮರಣ ಹೊಂದಿದ್ದರೆ, ಮತ್ತು ಅವನು ಸಮಾಧಿ ಸಂಸ್ಕಾರಕ್ಕೆ ಹೊಗಲು ಇಚ್ಛೆಯುಳ್ಳವನಾಗಿದ್ದನು. ಅವರು ಮರಣ ಹೊಂದಿದ ದಿನವೇ ಅವನನ್ನು ಸಮಾದಿಮಾಡಲು ಇದು ಬಹಳ ನಿಧಾನ ಪ್ರಕ್ರಿಯೆ ಆಗಬಹುದು (27:59, 60; ಅಪೊಸ್ತಲರ ಕೃತ್ಯಗಳು 5:5, 6, 10). ಸಮಾದಿಯು ಕೆಲವು ಸಾರಿ ಇಡಿ ವಾರವೆಲ್ಲಾ ಗೋಳಾಡುತ್ತಿದ್ದರು (ಆದಿಕಾಂಡ 50:10; 1 ಸಮುವೇಲ 31:13). ಇಂಥಹ ಮನಕರಗುವ ಕೋರಿಕೆಯು ಯೇಸು ನಿಷೇಧಿಸಿರುವದು ಸಂಶಯಾತ್ಮಕವಾಗಿದೆ.

ಮೂರನೆಯದು, ಆ ವ್ಯಕ್ತಿಯ ತಂದೆ ಸ್ವಲ್ಪ ಸಮಯಕ್ಕಿಂತ ಮುಂಚೆ ಸತ್ತಿದ್ದಾನೆ ಮತ್ತು ಸಮಾದಿಯ ಮೊದಲ ಹಂತವು ಮುಗಿದಿವೆ. ಶವವು ತೆಗೆದುಕೊಂಡು ಅದನ್ನು ಸುತ್ತಿ ಸಮಾದಿಯಲ್ಲಿಟ್ಟಿದ್ದಾರೆ. ಹೀಗಿರುವಾಗ ಮಗನು ಒಂದು ವರ್ಷದ ನಂತರ ವಾಪಸ್ಸು ಬಂದಿದ್ದಾನೆ ಮತ್ತು ಆ ಎಲುಬುಗಳು ಸಮಾದಿಯ ಪೆಟ್ಟಿಗೆಯಲ್ಲಿ ಅದನ್ನು ಮೃತರ ಎಲುಬುಗಳ ಉಗ್ರಾಣವೆಂದು ಕರೆಯುತ್ತಾರೆ ಅದರಲ್ಲಿ ಇಡಬೇಕಾಗಿದೆ.[5] ಆ ಪೆಟ್ಟಿಗೆ ತಿರುಗಿ ತೆಗೆದುಕೊಂಡು ಹೋಗಿ ಸಮಾದಿಯ ಗೂಡಿನಲ್ಲಿ ಇಡಬೇಕಿದೆ, ಮುಂದೆ ಸಾಯುವವರಿಗಾಗಿ ಅಲ್ಲಿ ಸ್ಥಳವನ್ನು ಮಾಡಬೇಕಾಗಿದೆ. ಈ ಕಾರಣದಿಂದ, ಆ ವ್ಯಕ್ತಿಯು ಯೇಸುವನ್ನು ಸಂಪೂರ್ಣವಾಗಿ ಹಿಂಬಾಲಿಸುವ ಸಮರ್ಪಣೆ ಮಾಡುವ ಮುಂಚೆ ತನ್ನ ಈ ಅಂತಿಮ ಘಟದ ಕಾರ್ಯಗಳನ್ನು ಮಾಡಬೇಕಾಗಿತ್ತು.

ಸತ್ತವರನ್ನು ಸಮಾದಿ ಮಾಡುವದು, ವಿಶೇಷವಾಗಿ ತಂದೆತಾಯಿಯವರು ಸತ್ತಾಗ ಸಮಾದಿ ಮಾಡುವದು ತ್ಯಾಗ ಪೂರ್ವಕವಾದ ಕಾರ್ಯವೆಂದು ಸ್ಪಷ್ಟವಾಗುತ್ತದೆ (ಆದಿಕಾಂಡ 23:1-20; 25:7-10; 35:28, 29; 49:28-50:14). ಇಸ್ರಾಯೇಲ್ಯರಿಗೆ ಐದನೇ ಆಜ್ಞೆ ಕೊಡಲ್ಪಟ್ಟಿದೆ "ನಿನ್ನ ತಂದೆತಾಯಿಗಳನ್ನು ಸನ್ಮಾನಿಸು" (ವಿಮೋಚನಕಾಂಡ 20:12; ಧರ್ಮೋಪದೇಶಕಾಂಡ 5:16). ಮತ್ತು ಈ ವ್ಯಕ್ತಿಯು ತನ್ನ ತಂದೆ ತಾಯಿಗೆ ಸರಿಯಾದ ಸಮಾದಿ ಕಾರ್ಯಮಾಡಿ ಮುಗಿಸಬೇಕೆಂದು ಆತನ ಅಭಿಪ್ರಾಯವಾಗಿದೆ. ಯೆಹೂದ್ಯ ಧರ್ಮಗುರುಗಳು ತಂದೆ ತಾಯಿಯವರನ್ನು ಸಮಾದಿ ಮಾಡುವದು ಒಬ್ಬನು ಧರ್ಮಶಾಸ್ತ್ರದ ವಚನಗಳನ್ನು ದಿನಾಲು ಕಂಠಪಾಠ ಹೇಳುವದಕ್ಕಿಂತೂ ಮತ್ತು ಧರ್ಮಶಾಸ್ತ್ರ ವಚನಗಳನ್ನು ಹೊಂದಿರುವ ಚರ್ಮದ ಚೀಲವನ್ನು ಮೈ ಮೇಲೆ ಧರಿಸುವದಕ್ಕಿಂತ ಮುಖ್ಯವಾದದ್ದೆಂದು ಜನರಿಗೆ ಬೋಧಿಸುತ್ತಿದ್ದರು.[6] ತರುವಾಯ ಮತ್ತಾಯನ ಸುವಾರ್ತೆ ಪ್ರಕಾರ, ತಂದೆ ತಾಯಿಗಳನ್ನು ಗೌರವಿಸಬೇಕೆಂಬ ದೇವರ ಆಜ್ಞೆಯನ್ನು ಯೇಸು ಪ್ರತಿಪಾದಿಸಿದ್ದಾನೆ (15:1-9). ಆದರೂ ಸಹ, ಯೇಸುವನ್ನು ಹಿಂಬಾಲಿಸುವಾಗ ಎಲ್ಲಾ ವಿಷಯಗಳಿಂತಲೂ ಇದು ಅಗ್ರಸ್ಥಾನ ಹೊಂದಿರುತ್ತದೆ.

**ವಚನ 22. ಯೇಸು ಅವನಿಗೆ, ನನ್ನ ಹಿಂದೆ ಬಾ, ಸತ್ತವರೇ ತಮ್ಮವರಲ್ಲಿ ಸತ್ತು ಹೋದವರ ಉತ್ತರ ಕ್ರಿಯೆಗಳನ್ನು ಮಾಡಲಿ ಎಂದು ಹೇಳಿದನು.** ಆತನ ಪ್ರತಿಕ್ರಿಯೆ ಲೋಕದ ಗಾದೆಯಂತೆ "ಪರಿಣಾಮ ಬೀರುವ" ಮಾತಿನಂತೆ ಇದೆ ಅದರ ಅರ್ಥ, ಪರಿಣಾಮಕಾರಿಯಾಗಿ ಹೇಳಿದ್ದಾನೆ, "ಪ್ರಪಂಚವೇ ಪ್ರಪಂಚದ ವಿಷಯವನ್ನು ನೋಡಿಕೊಳ್ಳಲಿ."[7] ಆತ್ಮೀಕವಾಗಿ ಸತ್ತವರು ದೈಹಿಕವಾಗಿ ಸತ್ತವರನ್ನು ಸಮಾದಿ ಮಾಡಲಿ ಎಂದು ಇದರ ಅರ್ಥವಾಗಿರಬಹುದು.

ಇನ್ನೊಂದು ಸಾಧ್ಯತೆ, ಅದು ನಿಂದಾಸ್ತುತಿ ತುಂಬಿರುತ್ತದೆ, ಅನೇಕರು ಬಹಳ ದಿನಗಳಿಂದ ದೈಹಿಕವಾಗಿ ಸತ್ತವರು ಸದ್ಯದಲ್ಲಿ, ಈಗ ಸತ್ತವರ ಸಮಾದಿ ಮಾಡಲಿ. ಉದಾಸೀನತೆಯಿಂದ, ಯೇಸು ಅವನಿಗೆ ಭಕ್ತಿಯುಳ್ಳವನಾಗಿದ್ದು ಶ್ರೇಷ್ಟವಾದ ಆತ್ಮೀಕ ವಿಷಯಕ್ಕೆ ಸಂಬಂಧಿಸಿದ ಜನರಿಗೆ ನಿತ್ಯ ಜೀವದ ಅಗತ್ಯತೆಯ ಕುರಿತು ದೇವರ ರಾಜ್ಯದ ಸಂದೇಶವನ್ನು ತೆಗೆದುಕೊಂಡು ಹೋಗಲು ಕರೆಯುತ್ತಿದ್ದಾನೆ.

ಲೂಕನು ಮೂರನೆಯದಾಗಿ ಕೇಳಿಕೊಳ್ಳುವವನ ವಿಷಯವಾಗಿ ಸ್ವಲ್ಪ ಸೇರಿಸಿದ್ದಾನೆ ಅವನು ಯೇಸುವಿಗೆ ಕೇಳಿದನು ಮತ್ತು ಹೀಗೆ ಹೇಳಿದನು, "ಸ್ವಾಮೀ, ನಾನು ಹಿಂಬಾಲಿಸುತ್ತೇನೆ; ಆದರೆ ಮೊದಲು ಮನೆಯಲ್ಲಿರುವವರಿಗೆ ಹೇಳಿ ಬರುವದಕ್ಕೆ ಅವಕಾಶ ಕೊಡು" ಅಂದನು (ಲೂಕ 9:61). ಈ ದೃಷ್ಯವು ಎಲಿಯನು ಎಲೀಷನನ್ನು ಕರೆದಿರುವದನ್ನು ನೆನಪುಮಾಡುತ್ತದೆ. ಪ್ರವಾದಿಯನ್ನು ಹಿಂಬಾಲಿಸುವ ಮೊದಲು ಎಲಿಷನು ಹಿಂತಿರುಗಿ ಹೋಗಿ ತನ್ನ ತಂದೆತಾಯಿಯವರಿಗೆ ಹೇಳಿ ಬರಬೇಕಾಗಿತ್ತು, ಎಲಿಯನು ಅದನ್ನು ಮಾಡಲು ಅವಕಾಶಕೊಟ್ಟನು (1 ಅರಸು 19:19-21). ಹೀಗಿದ್ದರೂ, ಯೇಸು ತನ್ನ ಶಿಷ್ಯತ್ವದ ವಿಷಯದಲ್ಲಿ ಎಲಿಯಾಗಿಂತಲೂ ಹೆಚ್ಚಿನ ಕಾರ್ಯವನ್ನು ಮಾಡಲು ಅಪ್ಪಣೆ ಮಾಡುತ್ತಿದ್ದಾನೆ. ಆತನು ಪ್ರತಿಕ್ರಿಯಿಸಿದ್ದು "ಯಾವನಾದರೂ ನೇಗಿಲಿನ ಮೇಲೆ ತನ್ನ ಕೈಯನ್ನು ಹಾಕಿ ಹಿಂದಕ್ಕೆ ನೋಡಿದರೆ ಅವನು ದೇವರ ರಾಜ್ಯಕ್ಕೆ ತಕ್ಕವನಲ್ಲವೆಂದು ಹೇಳಿದನು" (ಲೂಕ 9:62). ಯೇಸುವಿನ ನಿಜವಾದ ಶಿಷ್ಯನಾಗಿರಲು ಸಂಪೂರ್ಣ ಸಮರ್ಪಣೆಯ ಅವಶ್ಯಕತೆ ಇದೆ. ಶಿಷ್ಯತ್ವ ಹಂತವನ್ನು ಅದು ಕೆಳಗಿನ ಮಟ್ಟಕ್ಕೆ ತರುವದು ಯೇಸುವಿಗೆ ಬೇಕಾಗಿರಲಿಲ್ಲ.

## ಅದ್ಯಾಯ

## ಯೇಸುವಿನ ಮಾನವಿಯತೆ (8:20)

ಯೇಸುವಿನಿಂದ "ಮನುಷ್ಯ ಕುಮಾರನು" ಎಂಬ ತಲೆಬರಹವನ್ನು ಕೆಲವು ಸಾರಿ ಉಪಯೋಗಿಸಲಾಗಿದೆ. ಆತನಿಗೆ "ಮನುಷ್ಯ ಕುಮಾರನು" ಎಂದು ಕರೆಸಿಕೊಳ್ಳುವ ಹಕ್ಕು ಆತನಿಗೆ ಇದೆ. ಆದರೆ ಆತನು "ಮನುಷ್ಯ ಕುಮಾರನು"ನೆಂದು ಕರೆಯಿಸಿಕೊಳ್ಳುವದನ್ನು ಆಯ್ದುಕೊಂಡನು. ಯೇಸು ತನ್ನ ಕುರಿತು ಮುಖ್ಯವಾದ ವ್ಯಾಖ್ಯಾನವನ್ನು ಮಾಡಿರುವ ಅಭಿಪ್ರಾಯ ಕಾಣಸುತ್ತದೆ. ಒಂದು ಕಡೆ ಆತನ ಮಾನವಿಯತೆ ಕುರಿತು ಒತ್ತಿ ಹೇಳುತ್ತದೆ. ಇನ್ನೊಂದು ಕಡೆ, ಆತನ ಮಾನವೀಯತೆ ಕುರಿತು ಒತ್ತಿ ಹೇಳುತ್ತದೆ. ಇನ್ನೊಂದು ಕಡೆ, ಇದು ಆತನ ವಿಮೋಚನೆ ಕಾರ್ಯ ಮತ್ತು ಅಧಿಕಾರದ ಸೇವೆ ಕುರಿತು ಒತ್ತಿ ಹೇಳುತ್ತದೆ. ದೇವರು ಮನುಷ್ಯನಾದನು ಅದರಿಂದ ಆತನು ಈ ರೀತಿಯಾಗಿ ನಮಗೆ ಸಂಬಂಧ ಹೊಂದಿದ್ದಾನೆ ಮತ್ತು ಆತನೇ ನಮ್ಮನ್ನು ತನ್ನ ಸಂಬಂಧದಲ್ಲಿ ಬರುವಂತೆ ಮಾಡಿದ್ದಾನೆ.

---

ಟಿಪ್ಪಣಿಗಳು

[1]Robert H. Mounce, *Matthew,* New International Biblical Commentary (Peabody, Mass.: Hendrickson Publishers, 1991), 77. [2]Michael J. Wilkins, "Matthew," in *Zondervan Illustrated Bible Backgrounds Commentary,* vol. 1, *Matthew*, *Mark*, *Luke*, ed. Clinton E. Arnold (Grand Rapids, Mich.: Zondervan, 2002), 59. [3]ಪ್ರವಾದಿಯ ಮಾನವತೆಯನ್ನು ಒತ್ತಿ ಹೇಳುವದಕ್ಕೆ ಯೆಹೆಜ್ಕೇಲ ಪುಸ್ತಕದಲ್ಲಿ "ಮನುಷ್ಯ ಕುಮಾರನು" ಎಂಬ ಪದ ಪ್ರಯೋಗವು ಕಾಣಿಸುತ್ತದೆ. [4]John MacArthur, Jr., *The MacArthur New Testament Commentary: Matthew 8-15* (Chicago: Moody Press, 1987), 24-25.[5]ನೋಡಿರಿ Mishnah *Sanhedrin* 6.6; *Pesahim* 8.8; *Moed Katan* 1.5, 6. [6]Mishnah *Berakoth* 3.1; *Talmud Berakoth* 31a. [7]MacArthur, 25.